# ಮೊದಲನೆಯ ಸಂಕಲನಾತ್ಮಕ ಪರೀಕ್ಷೆ
## 9ನೆಯ ತರಗತಿ
## ಪ್ರಥಮ ಭಾಷೆ ಸಿರಿ ಕನ್ನಡ

**ಸಮಯ :3.ಗಂಟೆ 15ನಿ** **ಗರಿಷ್ಠ ಅಂಕಗಳು : 100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

1. **'ಶುದ್ಧಿಯನ್ನು'** ಪದದಲ್ಲಿ ಉಂಟಾದ ಸಂಧಿ **1x6=6**
   (ಅ) ಆಗಮಸಂಧಿ (ಆ) ಗುಣಸಂಧಿ
   (ಇ) ಆದೇಶಸಂಧಿ (ಈ) ಲೋಪಸಂಧಿ
2. ಜಯಪುರ ನನ್ನ ಪಾಲಿಗೆ ಹೊಸತಾಗಿರಲಿಲ್ಲ – ಈ ವಾಕ್ಯದಲ್ಲಿರುವ **ಸರ್ವನಾಮ**
   (ಅ) ಜಯಪುರ (ಆ) ನನ್ನ
   (ಇ) ಪಾಲಿಗೆ (ಈ) ಹೊಸ
3. **'ಗುರುವನ್ನು'** ಪದದಲ್ಲಿರುವ ವಿಭಕ್ತಿಯ ಹೆಸರು
   (ಅ) ಪ್ರಥಮಾ (ಆ) ದ್ವಿತೀಯ
   (ಇ) ತೃತೀಯಾ (ಈ) ಚತುರ್ಥೀ
4. ಕನ್ನಡ ವರ್ಣಮಾಲೆಯಲ್ಲಿನ **ಅನುನಾಸಿಕಗಳು**
   (ಅ) ಅಂ, ಅಃ (ಆ) ಖ,ಛ,ಠ,ಥ,ಫ
   (ಇ) ಅ,ಆ,ಇ,ಈ,ಉ (ಈ) ಙ,ಞ,ಣ,ನ,ಮ
5. **ಕರ್ಮಧಾರಯ ಸಮಾಸಕ್ಕೆ** ಉದಾಹರಣೆ
   (ಅ) ಒಗ್ಗಟ್ಟು (ಆ) ಹೆಮ್ಮರ
   (ಇ) ಮರಗಾಲು (ಈ) ಬೆಟ್ಟದಾವರೆ
6. ನೆಲದ ಮೇಲೆ ಬಿದ್ದ ಭರತನನ್ನು ಶ್ರೀರಾಮನು ನೋಡಿದನು.– ಈ ವಾಕ್ಯದಲ್ಲಿನ **ಕ್ರಿಯಾಪದ**
   (ಅ) ನೆಲ (ಆ) ಶ್ರೀರಾಮ
   (ಇ) ಭರತ (ಈ) ನೋಡಿದನು

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ** **1x4=4**

7. ತರಕ್ಷು : ಹುಲಿ : : ವಾತ್ಸಲ್ಯ : ______________
8. ವೀರ : ಬೀರ : : ರಾಯ : ______________
9. ಕಾಡುಮೇಡು : ಜೋಡುನುಡಿ : : ಬಣ್ಣ ಬಣ್ಣ : ______________
10. ದರ್ಶನವನ್ನು: ಆಗಮಸಂಧಿ : : ಜಾವದಲ್ಲೆದ್ದು: ______________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **1x7=7**

11. ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?
12. ಜಯಪುರದ ಪೂರ್ವದ ರಾಜಧಾನಿ ಯಾವುದು?
13. ಸ್ವಾಮಿಯವರು ನುಡಿಸುತ್ತಿದ್ದ ಸಂಗೀತ ವಾದ್ಯ ಯಾವುದು?
14. ರಾಧಾಕೃಷ್ಣನ್ ಅವರ ತಂದೆತಾಯಿಯರ ಹೆಸರೇನು?
15. ಭರತನನ್ನು ಹೊಗಳುತಿದ್ದ ಮೂರು ಲೋಕಗಳು ಯಾವುವು?
16. ಅಭಯರುಚಿಯ ಸಹೋದರಿಯ ಹೆಸರೇನು?
17. ಪಂಢರಿಬಾಯಿ ನಟಿಸಿದ ಮೊದಲ ಚಲನಚಿತ್ರದ ಹೆಸರೇನು?

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **2x10=20**

18. ಮಂತ್ರಾಲೋಚನೆಯನ್ನು ಹೇಗೆ ನಡೆಸಬೇಕೆಂದು ರಾಮನ ಅಭಿಪ್ರಾಯ?
19. ಶ್ರೀರಾಮನು ಹೇಳಿದಂತೆ ದೂತನು ಹೇಗಿರಬೇಕು?
20. ಮೀರಬಾಯಿ ದೇವಾಲದ ಸೌಂದರ್ಯವನ್ನು ವಿವರಿಸಿ.
21. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.
22. ಕವಿ ಎಂತಹ ಹಾಡು ಗುಡಗಬೇಕು ಎಂದು ಆಶಿಸುತ್ತಾರೆ?
23. ಅಭಯರುಚಿ ತಲ್ಲಣಗೊಳ್ಳಲು ಕಾರಣವೇನು?
24. ಪಂಢರಿಬಾಯಿ ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
25. ಪಂಢರಿಬಾಯಿ ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?
26. ಲಾಂಚು ಬರುವವರೆಗೆ ಹೊತ್ತು ಕಳೆಯಲು ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು?
27. ಲಾಂಚು ಹೊಳೆಯ ದಡಕ್ಕೆ ಬಂದುನಿಂತಾಗ ಜನರ ಗಡಿಬಿಡಿ ಹೇಗಿರುತ್ತದೆ?

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **3x2=6**

28. ಡಾ.ಎಸ್.ಎಲ್. ಭೈರಪ್ಪ
29. ರತ್ನಾಕರವರ್ಣಿ

**VI. 30. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **3x1=3**

ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್

**VII.31) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **3x1=3**

ಅಂಬುಜವೆಲ್ಲವು ರವಿಯ ನೋಡುವಂತೆ ತುಂಬಿದ ಸಭೆಯೆಲ್ಲ ನೃಪನ ನೋಡಿತು

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **3x1=3**

32. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು?

**ಅಥವಾ**

ತುಂಬಿದ ಕೊಡ ತುಳುಕುವುದಿಲ್ಲ

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **3x5=15**

33. "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು"
34. "ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ"
35. "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯರಂತೆ ಕಂಡು ವರ್ತಿಸಿದವರು"
36. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"
37. "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"
38. "ಕನ್ನಡದೊಳಗೊಂದು ಕಥೆಯ ಪೇಳುವೆನು"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **4x1=4**

39. ನವಭಾವ______________________________

____________________________________

____________________________________

________________________ವೀರಧ್ವನಿಯೇರಬೇಕು.

**ಅಥವಾ**

ಜಾತಿಕುಲ ____________________________

____________________________________

____________________________________

___________________________ ಗುಡಗಬೇಕು.

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

**4x1=4**

40. ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ
ವ್ರಜದಿಂ ಪೂಜಿಸುವುದು ಜೀ
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4x2=8**

41. ಅ) ಜಂತ್ರ ಮಂತ್ರದ ವಿಶೇಷತೆಯನ್ನು ಕುರಿತು ಬರೆಯಿರಿ

**ಅಥವಾ**

ಆ) ಜಯಪುರದ ಬೀದಿ ಮತ್ತು ಮನೆಗಳ ಸೌಂದರ್ಯ ಹಾಗೂ ಅಲ್ಲಿನ ಜನರಿಗೆ ಬಣ್ಣದ ಮೇಲಿರುವ ಮೋಹವನ್ನು ಕುರಿತು ಬರೆಯಿರಿ.

42. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಅಥವಾ**

ಸು.ರಂ.ಎಕ್ಕುಂಡಿಯವರ 'ಪಾರಿವಾಳ' ಪದ್ಯವನ್ನು ಕಥಾರೂಪದಲ್ಲಿ ಬರೆಯಿರಿ

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 1x4=4(2+2)

43. ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗಿರುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಅಲ್ಲಿ ಕಾಣುತ್ತದೆ. ಕೆಲವು ಕೀಟ, ಉರಗ ಸಂತತಿ ಮತ್ತು ಹಲವು ಸಸ್ತನಿಗಳೂ ಗೂಡು ಕಟ್ಟುತ್ತವೆ. ಆದರೆ ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಬೇರಾವುದಕ್ಕೂ ಬಾರದು.

ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಎತ್ತರದ ಮರದ ತುದಿ, ಕಣಿವೆ, ಬಿಲ, ದ್ವೀಪ ಅಥವಾ ನೀರಿನ ಮೇಲೆ ಅವು ಗೂಡು ಕಟ್ಟಬೇಕು. ಮೊಟ್ಟೆ ಇಡುವ ಬೆನ್ನು ಮೂಳೆ ಪ್ರಾಣಿಗಳಲ್ಲಿ ಹಕ್ಕಿಗಳೇ ಅತಿಹೆಚ್ಚು ಉಷ್ಣದೇಹಿಗಳು. ಅವುಗಳ ದೇಹದ ಉಷ್ಣತೆಯನ್ನು ಕಾಪಾಡಲು, ಮೊಟ್ಟೆಗಳಿಗೆ ಹಾಗೂ ತುಪ್ಪಳವಿಲ್ಲದ ಮರಿಗಳಿಗೆ ಕಾವು ಕೊಡಲು ಬೆಚ್ಚನೆಯ ಗೂಡು ಬೇಕು. ತಾಯಿ ಗರ್ಭಾಶಯದಲ್ಲಿರುವ ಭ್ರೂಣದಷ್ಟೇ ಗೂಡಿನಲ್ಲಿರುವ ಮೊಟ್ಟೆ ಮರಿಗಳು ಸುರಕ್ಷಿತವಾಗಿರುತ್ತವೆ. ಅದರಿಂದಲೇ 'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ' ಎಂಬ ಗಾದೆ ರೂಢಿಯಲ್ಲಿದೆ. ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆ ಹಕ್ಕಿಯ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ. ನಭದಲ್ಲಿ ಹಾರಿ, ಪರ್ವತಗಳನ್ನು ಏರಿ, ಸಾಗರ, ದ್ವೀಪಗಳನ್ನು ದಾಟುವ ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿಶಿಖರದ ನೆತ್ತಿ, ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ. ಹೀಗೆ ಎಲ್ಲೆಲ್ಲೂ ಅವು ಗೂಡು ಕಟ್ಟಬಲ್ಲವು. ಈ ವಿಚಾರದಲ್ಲಿ ಮಾತ್ರ ಹಕ್ಕಿಯನ್ನು ಬೇರೆ ಯಾವ ಸಂಕುಲವೂ ಮೀರಿಸಲಾರದು.

**ಪ್ರಶ್ನೆಗಳು:**

ಅ) ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

ಆ) ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

**XIV.44.ನಿಮ್ಮನ್ನು ವಿಜಯಪುರದ ಶ್ರೀಶಾರದಾ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಮನ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು 2 ದಿನ ರಜೆ ಕೋರಿ ನಿಮ್ಮ ತರಗತಿ ಶಿಕ್ಷಕರಿಗೊಂದು ಪತ್ರ ಬರೆಯಿರಿ 5x1=5**

**XV.45. ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ **5x1=5**

**ಅಥವಾ**

ನಿರುದ್ಯೋಗ ಸಮಸ್ಯೆ